ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 15-03-2021 ಪ್ರಶ್ನೆ ಸಂಖ್ಯೆ : 1006(1333)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 15-03-2021

ಉತ್ತರಿಸುವ ಸಚಿವರು: ಮಾನ್ಯ ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಷಯ : ರಾಜ್ಯದಲ್ಲಿನ ಡೀಮ್ಡ್ ಫಾರೆಸ್ಟ್ ಸಮಸ್ಯೆಯ ಕುರಿತು

(ಅ) ರಾಜ್ಯದಲ್ಲಿ ಯಾವ ಆಧಾರದಲ್ಲಿ ಡೀಮ್ಡ್ ಫಾರೆಸ್ಟ್ ಪ್ರದೇಶವನ್ನು ಗುರುತಿಸಲಾಗಿರುತ್ತದೆ; ಡೀಮ್ಡ್ ಫಾರೆಸ್ಟ್ ವ್ಯಾಖ್ಯಾನವು ಯಾವ ವರ್ಷದಿಂದ ಜಾರಿಗೆ ಬಂದಿರುತ್ತದೆ; ಈ ಡೀಮ್ಡ್ ಫಾರಸ್ಟ್ ವ್ಯಾಪ್ತಿಗೆ ಒಳಪಡುವ ಪ್ರದೇಶದ ಭೌಗೋಳಿಕ ಮತ್ತು ನೈಸರ್ಗಿಕ ಅಂಶಗಳು ಯಾವುವು; ರಾಜ್ಯದಲ್ಲಿ ಗುರುತಿಸಲಾದ ಡೀಮ್ಡ್ ಫಾರೆಸ್ಟ್‌ನ ವಿಸ್ತೀರ್ಣವೆಷ್ಟು; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ರೈತರು ನೈಜ ಕೃಷಿಯನ್ನು ಹೊಂದಿದ ತೋಟ, ಹಟ್ಟಿ, ಗದ್ದೆ, ಬಾವಿ, ಮನೆ, ಅಂಗಳಗಳನ್ನು ಡೀಮ್ಡ್ ಫಾರೆಸ್ಟ್‌ಗಳೆಂದು ಗುರುತಿಸಿರುವುದು ನಿಜವೇ; ಇದರಿಂದ ಕಾಯಿದೆಯಂತೆ ನಮೂನೆ 53, 57 ಮತ್ತು 94 ಸಿ ಕಾಲಂ ನಂತೆ ಅರ್ಜಿ ಸಲ್ಲಿಸಿದ ಗ್ರಾಮೀಣ ರೈತರು ಕೃಷಿ ಭೂಮಿಯ ಸ್ವಾಧೀನತೆ ಮತ್ತು ಕೃಷಿ ಮಾಡುತ್ತಿದ್ದರೂ ಹಕ್ಕುಪತ್ರ ನೀಡದೇ ಶೋಷಣೆಗೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರೈತರು ಕೃಷಿ ಮಾಡುತ್ತಿರುವ ಭೂಮಿಯನ್ನು ಡೀಮ್ಡ್ ಫಾರೆಸ್ಟ್ ಎಂದು ಗುರುತಿಸಿದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ವಹಿಸಲಾಗಿದೆಯೇ;

(ಇ) ಡೀಮ್ಡ್ ಫಾರೆಸ್ಟ್ ಎಂದು ಗುರುತಿಸಿದ ಜಮೀನಿನಲ್ಲಿ ಹಿತಾಸಕ್ತಿದಾರರ ಸರ್ವೆಯನ್ನು ನಡೆಸಿ ರೈತರ ನೈಜ್ಯ ಕೃಷಿ ಭೂಮಿ ಮತ್ತು ಅರಣ್ಯ ಪ್ರದೇಶದ ಗಡಿಯನ್ನು ಗುರುತಿಸಿ ರೈತರಿಗೆ ಸಾಗುವಳಿ ಚೀಟಿಯನ್ನು ನೀಡಲು ಸರ್ಕಾರದ ಕ್ರಮವೇನು; ರೈತರ ಕೃಷಿ ಮತ್ತು ಕೃಷಿ ಭೂಮಿಯ ಹಕ್ಕನ್ನು ದೃಡಪಡಿಸಲು ಸರ್ಕಾರದ ಕ್ರಮಗಳಾವುವು?